ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
**Visvesvaraya Technological University**
(State University of Government of Karnataka Established as per the VTU Act, 1994)
"Jnana Sangama" Belagavi-590018, Karnataka, India
National Service Scheme

ಪ್ರೊ. ಬಿ. ಈ. ರಂಗಸ್ವಾಮಿ
ಕುಲಸಚಿವರು

ದೂರವಾಣಿ ಸಂಖ್ಯೆ : (0831) 2405468
ಫ್ಯಾಕ್ಸ ಸಂಖ್ಯೆ : (0831) 2405467

ಸಂ.ವಿತಾವಿ/ಬಿಜಿಎಮ್/ಎನ್.ಎಸ್.ಎಸ್./ಸು/09/2023-24/ 889

ದಿನಾಂಕ : 20 JUN 2023

## ಸುತ್ತೋಲೆ

**ವಿಷಯ :** ವಿಶ್ವ ಮಾದಕ ವಸ್ತುವಿರೋಧಿ ದಿನದ ಅಂಗವಾಗಿ ದಿನಾಂಕ 26.06.2023 ರಂದು ಬೃಹತ್ ಕಾಲ್ನಡಿಗೆ ಜಾಗೃತಿ ಜಾಥ ಕಾರ್ಯಕ್ರಮಕ್ಕೆ ಸ್ವಯಂ ಸೇವಕ/ಸೇವಕಿಯರನ್ನು ನಿಯೋಜಿಸುವ ಕುರಿತು.

**ಉಲ್ಲೇಖ:** ಯುಸೇಇ/ರಾಸೇಯೋ/30/2023-24/120 ದಿನಾಂಕ : 16-06-2023

ಈ ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯ ಎನ್.ಎಸ್.ಎಸ್. ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಭವನ, ಬೆಂಗಳೂರು ಇವರ ಸಹಯೋಗದಲ್ಲಿ ದಿನಾಂಕ : 26.06.2023 ರಂದು ವಿಶ್ವ ಮಾದಕ ವಸ್ತು ವಿರೋಧಿ ದಿನದ ಅಂಗವಾಗಿ ವಿಧಾನ ಸೌಧ ಗ್ರಾಂಡ್ ಸ್ಟೈಪ್ಸ್ ನಿಂದ 3 ಕಿ.ಮೀ ಬೃಹತ್ ಕಾಲ್ನಡಿಗೆ ಜಾಗೃತಿ ಜಾಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಮಾನ್ಯ ಯುವಸಬಲೀಕರಣ ಮತ್ತು ಕ್ರೀಡಾ ಸಚಿವರು ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಮುಂದುವರೆದು, ಸದರಿ ಕಾರ್ಯಕ್ರಮಕ್ಕೆ ತಮ್ಮ ಮಹಾವಿದ್ಯಾಲಯಗಳಿಂದ ಕನಿಷ್ಠ 20 ಎನ್.ಎಸ್.ಎಸ್. ಸ್ವಯಂ ಸೇವಕ/ಸೇವಕಿಯರು ಅಥವಾ ವಿದ್ಯಾರ್ಥಿಗಳು ಹಾಗೂ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳನ್ನು ಸದರಿ ದಿನಾಂಕದಂದು ಕಡ್ಡಾಯವಾಗಿ ನಿಯೋಜಿಸಲು ಮತ್ತು ಬೆಳಿಗ್ಗೆ 7.30ಕ್ಕೆ ವರದಿ ಮಾಡಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

**ಸೂಚನೆ :**

1. ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೂ ಲಘು ಉಪಹಾರದ ವ್ಯವಸ್ಥೆಯಿರುತ್ತದೆ.
2. ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೂ ಪ್ರಶಂಸನಾ ಪತ್ರ ವಿತರಿಸಲಾಗುವುದು.

20/06/23

ಕುಲಸಚಿವರು

**ಇವರಿಗೆ,**

ಪ್ರಾಂಶುಪಾಲರು/ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳು
ವಿ.ತಾ.ವಿ ಆಧೀನಕ್ಕೊಳಪಡುವ ಅಭಿಯಾಂತ್ರಿಕ ಮತ್ತು ತಾಂತ್ರಿಕ
ಮಹಾವಿದ್ಯಾಲಯಗಳು, ಬೆಂಗಳೂರು ವಿಭಾಗ

**ಪ್ರತಿ ಮಾಹಿತಿಗಾಗಿ :**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಮಾನ್ಯ ಕುಲಸಚಿವರು, ಆಡಳಿತ ವಿಭಾಗ, ವಿ.ತಾ.ವಿ., ಬೆಳಗಾವಿ.
3. ವಿಶೇಷಾಧಿಕಾರಿಗಳು., ಸಿ.ಎನ್.ಸಿ. ವಿಭಾಗ, ವಿತಾವಿ., ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿಯ ವೆಬ್ ಸೈಟನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.